ಅಧ್ಯಕ್ಷರು: ಕಾನೂನನ್ನು ಸ್ಪಷ್ಟವಾಗಿ, ಶುದ್ಧವಾಗಿ, ಆಚರಣೆಗೆ ತರತಕ್ಕಂತಹ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ.

ಶ್ರೀ ಡಿ.ಆರ್.ಪಾಟೀಲ್: ಲೀಗಲ್ ಒಪೀನಿಯನ್ ತೆಗೆದುಕೊಂಡ ಮೇಲೆ ಕಾನೂನು ಮುರಿದಿದ್ದಾರೆ ಎಂದು ಇವರಿಗೆ ಗೊತ್ತಾದ ಮೇಲೆ ಸಂಬಂಧಿಸಿದ ಅಧಿಕಾರಿಯನ್ನು ಸಸ್ಪೆಂಡ್‌ನಲ್ಲಿ ಇಡುತ್ತಾರಾ?

ಅಧ್ಯಕ್ಷರು: ಕ್ರಮವನ್ನು ಜರುಗಿಸುತ್ತಾರೆ.

ಶ್ರೀ ಡಿ.ಆರ್.ಪಾಟೀಲ್: ನಮಗೆ ಕ್ರಮ ಬೇಕಾಗಿಲ್ಲ. ಕ್ರಮ ಎಂದರೆ ಏನು? ಅವರನ್ನು ಸಸ್ಪೆಂಡ್ ಮಾಡಲಿ.

ಅಧ್ಯಕ್ಷರು: ಮಾನ್ಯ ಸಹಕಾರಿ ಸಚಿವರು ಇದನ್ನು ಪರಿಶೀಲನೆ ಮಾಡಿ.

ಶ್ರೀ ಎಸ್.ಎಸ್.ಪಾಟೀಲ್: ಇದರ ಬಗ್ಗೆ ಪರಿಶೀಲನೆ ಮಾಡುವುದಿಲ್ಲ. ಕಾನೂನು ಪ್ರಕಾರ ನಡೆದುಕೊಳ್ಳುತ್ತೇವೆ.

Mr. Speaker: I don't want any of you to be serious ಲಾಸ್ಟ್‌ಡೇ.

ಶ್ರೀ ಡಿ.ಆರ್.ಪಾಟೀಲ್: ಅಧ್ಯಕ್ಷರೆ, ತಾವು ರಕ್ಷಣೆ ಕೊಡಬೇಕಾದದ್ದು ಸರ್ಕಾರಕ್ಕಲ್ಲ, ನಮಗೆ ತಾವು ರಕ್ಷಣೆಯನ್ನು ಕೊಡಬೇಕು. ತಾವು ಸರ್ಕಾರಕ್ಕೆ ರಕ್ಷಣೆಯನ್ನು ಕೊಟ್ಟರೆ ಹೇಗೆ?

ಅಧ್ಯಕ್ಷರು: ಮಾನ್ಯ ಸಿದ್ದನಗೌಡರೆ, ಆ ಸೊಸೈಟಿ ಸೂಪರ್‌ಸೀಡ್ ಆದ ವಿಚಾರದ ಬಗ್ಗೆ ಹೇಳಿ.

(ಎ) ಹುಬ್ಬಳ್ಳಿಯ ಟಿಎಪಿಎಂಸಿಗೆ ಚುನಾವಣೆ

ಶ್ರೀ ಪಿ.ಸಿ.ಸಿದ್ದನಗೌಡರ್ (ಕಲಘಟಗಿ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿರುವ ಟಿಎಪಿಎಂಸಿ ಚುನಾವಣೆ ಆಗಿಲ್ಲವೆಂದು ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿಯವರು ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದ್ದಾಗ ಸಬ್‌ಜ್ಯುಡಿಸ್ ಆಗುವಾಗ ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದಾರೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ: 28-11-95ಕ್ಕೆ ಟಿಎಪಿಎಂಸಿ ಚುನಾವಣೆಯನ್ನು ಕರೆದಿದ್ದರು. ಆ ಚುನಾವಣೆಯೂ ಸ್ಟೇ ಆಗಿ ಆ ಬಾಕ್ಸ್‌ಗಳೆಲ್ಲಾ ಅಲ್ಲೇ ಇದ್ದು, ಇದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಮುಂದೆ ಸರ್ಕಾರದವರು ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ಒಂದು ಆದೇಶವನ್ನು ಹೊರಡಿಸಿದರು. ಅದನ್ನು ಈ ಆರ್ಡರ್‌ನಲ್ಲಿ

ಕೊಟ್ಟಿದ್ದಾರೆ. ನನ್ನ ಕಳಕಳಿ ತಮ್ಮಲ್ಲಿ ಏನೆಂದರೆ ಈ ಕೋರ್ಟಿನಲ್ಲಿ ಪೆಂಡಿಂಗ್ ಇದ್ದಾಗ, ಸಬ್‌ಜ್ಯುಡೀಸ್ ಆದಾಗ ಸಹಕಾರಿ ಮಂತ್ರಿಗಳು ಒತ್ತಾಯ ಮಾಡಿದರೋ ಗೊತ್ತಿಲ್ಲ. ರಿಜಿಸ್ಟಾರ್ ಆಫ್ ಕೋ ಅಪರೇಟೀವ್ ಸೊಸೈಟಿಯವರು ಆದೇಶದಲ್ಲಿ ಹೇಳುತ್ತಾರೆ. ಅದೇನೆಂದರೆ ರಿಟ್ ಅರ್ಜಿ ಸಂಖ್ಯೆ: 40507: 95: ಸಿಎಸ್‌ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಬಹುದಾದ ತೀರ್ಪಿಗೆ ಒಳಪಟ್ಟು ಸಹಕಾರಸಂಘಗಳ ಕಾಯಿದೆ 1959 ಕಲಂ: 28ರ ಪ್ರಕಾರ ಸೂಪರ್‌ಸೀಡ್ ಮಾಡಿದ್ದೇವೆಂದು ಹೇಳುತ್ತಾರೆ. ಇದರಲ್ಲಿ ನನ್ನ ಕಳಕಳಿ ಏನೆಂದರೆ ಕೋರ್ಟಿನಲ್ಲಿ ಪೆಂಡಿಂಗ್ ಇದ್ದಾಗ, ಸೂಪರ್‌ಸೀಡ್ ಕಾನೂನು ಬಾಹಿರವಾಗುತ್ತದೆ. ಅಧಿಕಾರಿಗಳನ್ನು ಪೇಚಿಗೆ ಸಿಗಿಸಬಾರದು. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಇದು ಬಹಳ ಒಳ್ಳೆಯ ಸೊಸೈಟಿಯಾಗಿದೆ. ಈ ಸೊಸೈಟಿಯನ್ನು ನಡೆಸಲು ಸರ್ಕಾರದಿಂದ ಒಂದು ನಯಾಪೈಸೆಯನ್ನು ತೆಗೆದುಕೊಂಡಿಲ್ಲ. ಇದು ಇಂಡಿಪೆಂಡೆಂಟ್ ಆಗಿ ನಡೆಯತಕ್ಕಂತಹ ಸಹಕಾರಿ ಸಂಸ್ಥೆಯಾಗಿದೆ. ಇದರಲ್ಲಿ ಏನು ರಾಜಕೀಯ ಉದ್ದೇಶವಿದೆ. ಅದು ಏನು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆ ಕಾರಣಕ್ಕಾಗಿ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಸಿದ್ದನಗೌಡರೇ, ಸೊಸೈಟಿ ಇಂಡಿಪೆಂಡೆಂಟ್ ಆಗಿ ಇರಲಿ, ನೀವು ಇಂಡಿಪೆಂಡೆಂಟ್ ಆಗಿ ನಡೆದುಕೊಳ್ಳುತ್ತೀರಿ ಅದೇ ಬರುವುದು ಪ್ರಾಬ್ಲಮ್.

ಶ್ರೀ ಎಸ್.ಎಸ್.ಪಾಟೀಲ್: ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿಯಮಿತ ಹುಬ್ಬಳ್ಳಿ ಇದರ 1992-93, 94-95ರ ಚುನಾಯಿತ ಆಡಳಿತ ಮಂಡಳಿಯು ದಿನಾಂಕ: 28-9-92ರಂದು ಅಧಿಕಾರಕ್ಕೆ ಬಂದಿದ್ದು, ಅದು ಇನ್ನು ಮುಂದುವರಿಯುತ್ತಿತ್ತು. 95-96, 97-98ರ ಅವಧಿಗೆ ಆಡಳಿತಮಂಡಳಿಯು ಚುನಾವಣೆಯನ್ನು ಜರುಗಿಸಲು ದಿನಾಂಕ: 28-11-95ರಂದು ನಿಗದಿಗೊಳಿಸಿ ಚುನಾವಣೆಯ ಕಾರ್ಯಕ್ರಮಗಳನ್ನು ಪ್ರಕಟಿಸಲಾಗಿತ್ತು. ಆದರೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: 168 ದಿನಾಂಕ: 6-11-95ರ ಮೇರೆಗೆ ಚುನಾವಣೆಯನ್ನು ಮುಂದೂಡಲಾಯಿತು. ತದನಂತರ ವಿ.ಎಸ್.ಕೆಂಚನಗೌಡರ್‌ರವರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆಯಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದರು. ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 14-12-95ರಂದು ಮಧ್ಯಂತರ ಆದೇಶವನ್ನು ನೀಡಿದ್ದು, ಸದರಿ ಆದೇಶದಂತೆ ಸಂಘದ ಆಡಳಿತ ಮಂಡಳಿಯ ಚುನಾವಣೆಯನ್ನು ದಿನಾಂಕ: 15-1-96ರೊಳಗಾಗಿ ಚುನಾವಣೆಯ ಅಧಿಕಾರಿಗಳು ನಿರ್ಣಯಿಸಿದರು. ಈ ಮಧ್ಯೆ ಕರ್ನಾಟಕ ಉಚ್ಚನ್ಯಾಯಾಲಯವು ದಿನಾಂಕ: 9-1-96 ನೀಡಿದ ಆದೇಶದಂತೆ ರಿಟ್ ಅರ್ಜಿಯು ನಿರ್ಣಯವಾಗುವವರೆಗೆ ಚುನಾವಣೆಯ ಫಲಿತಾಂಶ ಪ್ರಕಟವಾಗದೆ ದಿನಾಂಕ: 28-9-92ರಂದು ಅಧಿಕಾರಕ್ಕೆ ಬಂದ ಆಡಳಿತ ಮಂಡಳಿಯು, ಇನ್ನು ಅಧಿಕಾರದಲ್ಲಿ ಮುಂದುವರಿಯುತ್ತಿದೆ.

ಸಹಕಾರಿ ಸಂಘಗಳ ಕಾಯಿದೆ ಕಲಂ: 28ಎ 4ರ ಮೇರೆಗೆ ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿಯು 5 ವರ್ಷಕ್ಕೆ ಮೇಲ್ಪಟ್ಟು ಮುಂದುವರಿಯಲು ಅವಕಾಶವಿರುವುದಿಲ್ಲ. ಹಾಗೂ ಅವಧಿಯು ಮುಗಿದ ನಂತರ ಅದು ತನ್ನ ಸ್ಥಾನವನ್ನು ತೆರವು ಮಾಡಿದಂತೆ ಎಂದು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಬಹುದಾದ ತೀರ್ಪಿಗೆ ಒಳಪಟ್ಟು ಸಹಕಾರ ಸಂಘಗಳ ಕಾಯಿದೆ ಕಲಂ: 28(ಎ) 5ರ ಮೇರೆಗೆ ಸಹಕಾರ ಸಂಘಗಳ ನಿಬಂಧಕರು ಅಥವಾ ಆ ಸಂಘದ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಮತ್ತು ಸಹಕಾರ ಸಂಘಗಳ ನಿಬಂಧಕರಿಂದ ಅಧಿಕಾರ ಪಡೆದ ಯಾವುದೇ ಅಧಿಕಾರಿ ಈ ಸಂಘದ ಆಡಳಿತ ಅಧಿಕಾರಿಯಾಗಿ ಪ್ರಭಾರ ವಹಿಸಿಕೊಂಡದ್ದು ಎಂದು ಪರಿಗಣಿಸಲು ಕಾನೂನಿನಲ್ಲಿ ಅವಕಾಶವಿರುವ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರು ಧಾರಾವಾಡ, ಇವರನ್ನು ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟಸಂಘ ನಿಯಮಿತ ಹುಬ್ಬಳ್ಳಿ, ಇದರ ಆಡಳಿತಾಧಿಕಾರಿಯಾಗಲು ಅಧಿಕಾರ ನೀಡುವುದು ಸಮಂಜಸವೆಂದು ಕಂಡುಬಂದಿದ್ದರಿಂದ ರಿಟ್ ಅರ್ಜಿಸಂಖ್ಯೆ 40,507ರಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ ನೀಡಬಹುದಾದ ತೀರ್ಪಿಗೆ ಒಳಪಟ್ಟು ಕರ್ನಾಟಕ ರಾಜ್ಯ ಸರ್ಕಾರದ ಸಹಕಾರಸಂಘಗಳ ನಿಬಂಧಕರು ದಿನಾಂಕ 6-11-98ರಂದು ಸಹಕಾರಸಂಘಗಳ ಉಪ ನಿಬಂಧಕರು ಧಾರವಾಡ ಇವರಿಗೆ ತಾಲ್ಲೂಕಾ ಹುಟ್ಟುವಳಿ ಮಾರಾಟ ಸಹಕಾರಸಂಘ, ಹುಬ್ಬಳ್ಳಿ ಇದರ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಅಧಿಕಾರ ನೀಡಿರುತ್ತಾರೆ. ಅವರು ದಿನಾಂಕ 7-11-98ರಂದು ಅಪರಾಹ್ನ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಮಾನ್ಯಅಧ್ಯಕ್ಷರೆ, ಕಾಯಿದೆ ಹೊಸದಾಗಿ ಬಂದಿರುವುದರಿಂದ ಏನಾಗಿದೆ ಅದು ಹೊಸದಾಗಿ ಇನ್ನೂ ಆಚರಣೆಗೆ ಬರುವಾಗ ಈ ಕೆಲವು ತೊಡರುಗಳು ಕಾಣುತ್ತವೆ. ಮೊದಲು ಏನಾಗಿತ್ತು ಕೋರ್ಟ್‌ನಲ್ಲಿ ಸ್ಟೇ ಆದ ಕೂಡಲೇ ಹಿಂದಿನವರು ಮುಂದುವರಿಯುತ್ತಿದ್ದರು. ಇವತ್ತು ಏನಾಗಿದೆ ಅಂದರೆ, ಕೋರ್ಟ್‌ನಲ್ಲಿ ಆರ್ಡರ್ ಆಗುವವರೆಗೆ ಇವರು ಮುಂದುವರಿಯುವುದಕ್ಕಾಗುವುದಿಲ್ಲ. ಐದು ವರ್ಷ ಆಗಿಬಿಟ್ಟರೆ ಆಟೊಮೆಟಿಕ್ ಆಗಿ ಅಡ್ಮಿನಿಸ್ಟ್ರೇಟರ್ ಬರಬೇಕೆಂದು ಕಾಯಿದೆ, ಆಡಳಿತ ಹೋದಂತೆ ಎಂದು ಭಾವಿಸಬೇಕೆಂದು ಹಾಕಿದ್ದೇವೆ. ಆ ಕಾರಣಕ್ಕೆ ಇವತ್ತು ಚಾರ್ಜ್ ತೆಗೆದುಕೊಂಡಿದ್ದಾರೆ. ಕೋರ್ಟ್ ಆರ್ಡರ್ ಚುನಾವಣೆಯನ್ನು ಡಿಕ್ಲೇರ್ ಮಾಡಿಯೆಂದು ಹೇಳಿದ ದಿವಸ ಅಲ್ಲಿ ಯಾರು ಅರಿಸಿ ಬರುತ್ತಾರೋ ಅವರು ಅಧಿಕಾರ ತೆಗೆದುಕೊಳ್ಳುತ್ತಾರೆ.

1.30 ಪಿಎಂ

ಶ್ರೀ ಪಿ.ಸಿ.ಸಿದ್ಧನಗೌಡರ್: ಮಾನ್ಯ ಅಧ್ಯಕ್ಷರೆ, ನಾನು ಕಾಯಿದೆ ಬಿಟ್ಟು ಮಾತನಾಡುವುದಿಲ್ಲ. ನಮ್ಮ ಪಾಯಿಂಟ್ ಏನೆಂದರೆ, ಎಲೆಕ್ಷನ್ ಆಗಿದೆ. ಡಬ್ಬಗಳು ಅಲ್ಲೇ ಇವೆ. ಕೇಸ್ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇದೆ ನಾನೇನು ಮಾಡಲಿ, ಎಲೆಕ್ಷನ್

ಮಾಡಲಿಲ್ಲವೆಂದು ಹೇಳುವಹಾಗೆ ಇಲ್ಲ ಇವರು. ಕೋರ್ಟ್ ಡೈರೆಕ್ಷನ್ ಕೊಟ್ಟಿದೆ.

ಅಧ್ಯಕ್ಷರು: ಕಾನೂನು ಪೊಸಿಷನ್ ಕರೆಕ್ಟಾಗಿ ಎಕ್ಸ್‌ಪ್ಲೈನ್ ಮಾಡಿದ್ದಾರೆ. ಅವರು ಕ್ಲಿಯರ್ ಆಗಿ ಹೇಳಿದ್ದಾರೆ. ಉಚ್ಚನ್ಯಾಯಾಲಯದ ತೀರ್ಪಿಗೆ ಒಳಪಡುತ್ತೇವೆಂದು ಹೇಳಿದ್ದಾರೆ ಆದೇಶದಲ್ಲಿ. ಆದ್ದರಿಂದ ಸಮಸ್ಯೆ ಇಲ್ಲ.

ಶ್ರೀ ಪಿ.ಸಿ.ಸಿದ್ಧನಗೌಡರ್: ಇದು ಸರಿಯಲ್ಲ.

ಅಧ್ಯಕ್ಷರು: ಕೋರ್ಟ್ ತೀರ್ಪು ಬಂದ ತಕ್ಷಣ ಅಧಿಕಾರವನ್ನು ಹ್ಯಾಂಡ್‌ಓವರ್ ಮಾಡುತ್ತೇವೆಂದು ಹೇಳಿದ್ದಾರೆ. ಕಾನೂನಿನಲ್ಲಿ ಅವಕಾಶವಿಲ್ಲ. ಕಾನೂನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅಲ್ಲಿ ನಿಧಾನ ಮಾಡಿದ್ದಾರೆ. ಇಲ್ಲಿ ಆರ್ಡರ್‌ಂಟ್ ಮಾಡಿದ್ದಾರೆ. ಎಲ್ಲಾ ಕಡೆಗೂ ಒಂದೇ ವೇಗದಲ್ಲಿ ಹೋಗಬೇಕಾಗುತ್ತದೆ.

ಶ್ರೀ ಪಿ.ಸಿ.ಸಿದ್ಧನಗೌಡರ್: ಒಂದು ಕಡೆ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇಲಾಖೆಯಲ್ಲಿ ಎಕ್ಸ್‌ಟೆಂಡ್ ಮಾಡುವುದಕ್ಕೆ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಅವರಿಗೆ ಬೇಕಾದವರನ್ನು ಅಲ್ಲಿ ತಂದು ಇಡುತ್ತಾರೆ. ಉತ್ತರ ಕೊಡುವ ಹಾಗೆ ಇಲ್ಲ. ★★

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಅದಕ್ಕೆ ವಿರುದ್ಧವಾಗಿ ಮಾತನಾಡಬೇಕು ಅಷ್ಟೆ ಇಲ್ಲಿ.

ಅಧ್ಯಕ್ಷರು: ಇರಲಿ. ಅವರ ಆಪಾದನೆ ಕಡತಕ್ಕೆ ಹೋಗುವುದಿಲ್ಲ. ಇದನ್ನು ಪತ್ರಿಕೆಯವರಿಗೂ ಹೇಳುತ್ತೇನೆ. ಹೀಗೆಲ್ಲಾ ಹೇಳುವುದಕ್ಕೆ ಬರುವುದಿಲ್ಲ. ಇದೆಲ್ಲ ನೋಟೀಸ್ ಕೊಟ್ಟು ಬರಬೇಕಾಗುತ್ತದೆ.

10. ಅಧ್ಯಕ್ಷರ ತೀರ್ಪು

ವಿಷಯ: ದಿ.3-11-1998ರ ನಡವಳಿಕೆಯಲ್ಲಿ ಕಡತದಿಂದ ತೆಗೆದ ಪದಗಳು

ದಿನಾಂಕ 3-11-1998ರಂದು ವಿಧಾನಸಭೆಯಲ್ಲಿ ಕಬ್ಬನ್‌ಪಾರ್ಕಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಚರ್ಚೆಯಲ್ಲಿ ಸನ್ಮಾನ್ಯ ಸದಸ್ಯರುಗಳು ಭಾಗವಹಿಸಿ ಮಾತನಾಡುವಾಗ ಈ ಕೆಳಕಂಡ ಪದಗಳನ್ನು ಮಾನ್ಯಸದಸ್ಯರಾದ ಶ್ರೀ ಹೆಚ್.ಎನ್.ನಂಜೇಗೌಡರು ಬಳಕೆ ಮಾಡಿರುತ್ತಾರೆ. ಅದನ್ನು ಓದುತ್ತೇನೆ

★★ ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.